# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1615
ಮಾನ್ಯ ಸದಸ್ಯರ ಹೆಸರು : ಟಿ.ಎನ್. ಜವರಾಯಿ ಗೌಡ
ಉತ್ತರಿಸುವ ದಿನಾಂಕ : 18.03.2026
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬಹಳ ವರ್ಷಗಳಿಂದ ರಾಜ್ಯದಲ್ಲಿರುವ ಗ್ರಾಮ ಆಡಳಿತಾಧಿಕಾರಿಗಳು(ವಿ.ಎ.ಗಳು) ಗ್ರಾಮ ಪಂಚಾಯಿತಿಗಳಿಗೆ ಬಾರದೆ ತಾಲ್ಲೂಕು/ನಾಡ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತೆಗೆದುಕೊಂಡಿರುವ ಕಟ್ಟು ನಿಟ್ಟಿನ ಕ್ರಮಗಳೇನು; (ವಿವರ ನೀಡುವುದು)</td><td rowspan="3">ಹೌದು, ಗ್ರಾಮ ಆಡಳಿತ ಅಧಿಕಾರಿಗಳ ಕಾರ್ಯಾಲಯದ ವಿಳಾಸ ಇಲ್ಲದೇ ಇರುವುದರಿಂದ ಸಾರ್ವಜನಿಕರಿಗೆ ಸಮಸ್ಯೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ2(5)ರಲ್ಲಿ ಅಗತ್ಯಪಡಿಸಲಾದಂತೆ ಗ್ರಾಮ ಆಡಳಿತ ಅಧಿಕಾರಿಗಳಿಗೆ ಕಛೇರಿ ಸ್ಥಳವನ್ನು ನಿಗದಿಪಡಿಸಿ ತಾಲ್ಲೂಕುವಾರು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಗ್ರಾಮ ಪಂಚಾಯಿತಿ ಕಟ್ಟಡ ಮತ್ತು ಇತರೆ ಸರ್ಕಾರಿ ಕಟ್ಟಡಗಳಲ್ಲಿ ಕಛೇರಿ ವ್ಯವಸ್ಥೆ ಮಾಡಲಾಗಿರುತ್ತದೆ.</td></tr>
<tr><td>ಆ)</td><td>ಸಾರ್ವಜನಿಕರು ಅದರಲ್ಲೂ ಹೆಚ್ಚಾಗಿ ರೈತರು 25-30 ಕಿ.ಮೀ.ಪ್ರಯಾಣ ಮಾಡಿ, ತಾಲ್ಲೂಕು ಕಛೇರಿ/ನಾಡಕಛೇರಿಗಳಿಗೆ ಹೋಗಿ ಅವರ ಕೆಲಸ ಮಾಡಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಸರ್ಕಾರದ ನಿರ್ಧಾರವೇನು; (ವಿವರ ನೀಡುವುದು)</td></tr>
<tr><td>ಇ)</td><td>ಇದಕ್ಕೆ ಕಡಿವಾಣ ಹಾಕಲು ಗ್ರಾಮ ಪಂಚಾಯಿತಿ ಕಛೇರಿಗಳಲ್ಲೇ, ಈ ಕಂದಾಯ ಇಲಾಖೆಯ ಆಡಳಿತಾಧಿಕಾರಿಗಳಿಗೆ ಪ್ರತ್ಯೇಕ ಕಛೇರಿ ತೆರೆದು ಕಾರ್ಯನಿರ್ವಹಿಸುವ ವ್ಯವಸ್ಥೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರ ತಕ್ಷಣ ನಿರ್ಧಾರ ತೆಗೆದುಕೊಳ್ಳುವುದೇ;</td></tr>
<tr><td>ಈ)</td><td>ವಂಶವೃಕ್ಷ ವಿತರಣೆ ಅಧಿಕಾರವನ್ನು ಎ.ಸಿ.ಗಳಿಗೆ ನೀಡಿದ ಅಧಿಕಾರಕ್ಕೆ ತಡೆಯಾಜ್ಞೆಯನ್ನು ತೆರವುಗೊಳಿಸಲಾಗಿದೆಯೇ;</td><td>ವಂಶವೃಕ್ಷ ವಿತರಣೆಯನ್ನು ನಾಡಕಛೇರಿಗಳಲ್ಲಿ ಸಂಬಂಧಿಸಿದ ಉಪತಹಶೀಲ್ದಾರರ ಮೂಲಕ ವಿತರಿಸಲಾಗುತ್ತಿದೆ.</td></tr>
</table>

| | | |
|---|---|---|
| ಉ) | ರಾಜ್ಯದಲ್ಲಿ ಸುಮಾರು 60 ಲಕ್ಷಕ್ಕೂ ಹೆಚ್ಚು ಕೃಷಿ ಭೂಮಿಗೆ ಪೌತಿ ಖಾತೆ ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ನಿಟ್ಟಿನಲ್ಲಿ ಅಧಿಕಾರಿ/ನೌಕರರಿಗೆ ಕರ್ತವ್ಯ ನಿರ್ವಹಿಸಲು ಸ್ಪಷ್ಟ ಆದೇಶ ನೀಡುವುದೇ? | ಬಂದಿದೆ.<br>ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್‌ಎಂ 2019, ದಿನಾಂಕ: 17.10.2020 ಮತ್ತು ತಿದ್ದುಪಡಿ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್‌ಎಂ 2019, ದಿನಾಂಕ: 10.01.2024 ರಂತೆ ಪೌತಿ/ವಾರಸಾ ಖಾತೆ ಆಂದೋಲನವನ್ನು ನಡೆಸಲು ಸರ್ಕಾರದ ವತಿಯಿಂದ ಸುತ್ತೋಲೆಗಳನ್ನು ಹೊರಡಿಸಲಾಗಿದ್ದು, ಪೌತಿ ಖಾತೆಗಾಗಿ ಅರ್ಜಿಗಳನ್ನು ಸ್ವೀಕರಿಸಲು ಭೂಮಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಕಂಇ 95 ಎಂಆರ್‌ಆರ್ 2025, ದಿನಾಂಕ: 21.04.2025ರಂತೆ ಮರಣ ಹೊಂದಿದ ಖಾತೆದಾರರ ವಾರಸುದಾರರ ಹೆಸರಿಗೆ ಖಾತೆ ಪಹಣಿ ಇಂದೀಕರಣ ಮಾಡುವ ನಿಟ್ಟಿನಲ್ಲಿ, ಕಂದಾಯ ಇಲಾಖೆಯ ಮೂಲಕ ಇ-ಪೌತಿ ತಂತ್ರಾಂಶವನ್ನು ನೀಡಲಾಗಿರುತ್ತದೆ.<br><br>ಸದರಿ ತಂತ್ರಾಂಶದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಮರಣ ಹೊಂದಿದ ವಾರಸುದಾರರ e-KYC ಪಡೆಯುವ ಮುಖಾಂತರ ವಂಶವೃಕ್ಷ ಹಾಗೂ ಮರಣ ಪ್ರಮಾಣ ಪತ್ರ ಮತ್ತು ಇತರೆ ದಾಖಲಾತಿಗಳನ್ನು ಪಡೆದು ಪೌತಿ ಖಾತೆ ಮಾಡಲು ಕ್ರಮವಹಿಸಲಾಗುತ್ತಿದೆ. |

<u>ಸಂಖ್ಯೆ: ಕಂಇ 42 ಬಿಎಸ್‌ಸಿ 2026</u>

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು